# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಲ್ಲಿದ್ದಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ನೀಡಬಹುದಾದ ಇಡಿಗಂಟಿನ ಪರಿಹಾರ ಪಾವತಿ ಬಗ್ಗೆ.

ಓದಲಾಗಿದೆ:

1. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ. 14/4977/2005-06/ ದಿನಾಂಕ 05-07-2007
2. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/4977/2005-06/ ದಿನಾಂಕ 21-08-2007
3. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ. 14/4977/2005-06/ ದಿನಾಂಕ 29-08-2011
4. ಸರ್ಕಾರಿ ಆದೇಶ ಸಂಖ್ಯೆ ಎಫ್ ಡಿ (ಸ್ಪೆಷಲ್)/203 ಪಿಇಎನ್ 2012 ದಿನಾಂಕ 16-01-2013
5. ಕರ್ನಾಟಕ ಸರ್ಕಾರದ ಖಜಾನೆ ನಿರ್ದೇಶನಾಲಯದ ಪತ್ರದ ಸಂಖ್ಯೆ ಖನಿ/ಎನ್.ಪಿ.ಎಸ್/11/ 11-12 ದಿನಾಂಕ 07-12-2013.

ಪ್ರಸ್ತಾವನೆ:

ಕರ್ನಾಟಕ ಸರ್ಕಾರದ ಸೇವೆಗೆ ದಿನಾಂಕ 01-04-2006 ರಂದು ಅಥವಾ ತರುವಾಯ ಸೇರುವ ಎಲ್ಲಾ ನೌಕರರಿಗೆ ಸರ್ಕಾರಿ ಆದೇಶ ಸಂಖ್ಯೆ ಎಫ್ ಡಿ (ವಿಶೇಷ) 04 ಪಿಇಟಿ 2005 ದಿನಾಂಕ 07-12-2013 ರಲ್ಲಿ ಜಾರಿಗೊಳಿಸಿರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ನಿಗಮವೂ ಸಹ ಸದರಿ ಆದೇಶವನ್ನು ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ. 14/4977/2005-06/ ದಿನಾಂಕ 05-07-2007 ರ ಮೂಲಕ ಅಳವಡಿಸಿಕೊಳ್ಳಲಾಗಿರುತ್ತದೆ.

ಮುಂದುವರೆದು, ಈ ಯೋಜನೆಯನ್ವಯ ನಿಗಮ / ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮೂಲ ವೇತನ ಮತ್ತು ತುಟ್ಟಿಭತ್ಯೆಯ ಮೇಲೆ ಲಭ್ಯವಾಗುವ ಶೇಕಡ 10 ರಷ್ಟನ್ನು ನಿಗಮತ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ. 14/4977/2005-06/ ದಿನಾಂಕ 05-07-2007 ರನ್ವಯ ಕೊಡುಗೆಯಾಗಿ ನೀಡಬೇಕಾಗಿರುತ್ತದೆ. ನಿಗಮವು ಅಷ್ಟೇ ಮೊತ್ತದ ಕೊಡುಗೆಯನ್ನು ನೀಡುತ್ತದೆ. ಈ ಯೋಜನೆಯ ನಿಧಿಯನ್ನು ಕವಿಪ್ರನಿನಿ / ಎಸ್ಕಾಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕವು ನಿರ್ವಹಿಸುತ್ತಿದೆ. ಈ ಯೋಜನೆಯನ್ವಯ ನೌಕರರು ಸಾಮಾನ್ಯವಾಗಿ ವಯೋ ನಿವೃತ್ತಿಯ ದಿನಾಂಕದಂದು ಯೋಜನೆಯಿಂದ ನಿರ್ಗಮಿಸುತ್ತಾರೆ. ಆ ಸಮಯದಲ್ಲಿ, ನೌಕರನು ಕಡ್ಡಾಯವಾಗಿ ಪಿಂಚಣಿ ಸಂಪತ್ತಿನ ಶೇಕಡ 40 ರಷ್ಟು ಮೊಬಲಗನ್ನು ವರ್ಷಾಸನಗಳಲ್ಲಿ (Annuity) ಗಳಲ್ಲಿ ತೊಡಗಿಸಬೇಕಾಗುವುದು. ಇದರಿಂದ ಅವರ ಜೀವಿತ ಅವಧಿಯಲ್ಲಿ ಪಿಂಚಣಿ ಮತ್ತು ತರುವಾಯ ಅವರ ಅವಲಂಬಿತರಿಗೆ ಕುಟುಂಬ ಪಿಂಚಣಿ ದೊರೆಯುತ್ತದೆ. ಉಳಿದ ಶೇಕಡ 60 ರಷ್ಟು ಪಿಂಚಣಿ ಸಂಪತ್ತನ್ನು ನೌಕರರಿಗೆ ಹಿಂದಿರುಗಿಸಲಾಗುವುದು. ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ನಿಗಮದ ನೌಕರರ ಪ್ರಕರಣಗಳಲ್ಲಿ ಅವರು ನಿವೃತ್ತಗೊಂಡ ನಂತರದಲ್ಲಿ ಈ ಯೋಜನೆಯನ್ವಯ ಪಡೆಯಲರ್ಹವಾದ ಸವಲತ್ತಿಗೆ ಮಾತ್ರ ಅವಕಾಶವನ್ನು ಕಲ್ಪಿಸಲಾಗಿದೆ. ವಯೋ ನಿವೃತ್ತಿ ಮುನ್ನವೇ ಸೇವೆಯಲ್ಲಿದ್ದಾಗಲೇ ಮೃತರಾಗುವ ನಿಗಮದ ನೌಕರರ ಪ್ರಕರಣಗಳಲ್ಲಿ ಅವರ ಕುಟುಂಬದವರಿಗೆ ನೀಡಬೇಕಾಗುವ ಸೌಲಭ್ಯಗಳ ಕುರಿತು ಅವಕಾಶವನ್ನು ಕಲ್ಪಿಸಿರುವುದಿಲ್ಲ.

ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸೇವೆಯಲ್ಲಿರುವಾಗಲೇ ಮೃತರಾಗುವ ನಿಗಮದ ನೌಕರರ ಕುಟುಂಬದವರ ಸಂಕಷ್ಟವನ್ನು ನಿವಾರಿಸುವ ಉದ್ದೇಶದಿಂದ ಮೃತ ನೌಕರರ ಕುಟುಂಬದವರಿಗೆ ಇಡಿಗಂಟು ಪರಿಹಾರ ನೀಡುವ ಯೋಜನೆಯನ್ನು ನಿಗಮವು ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ. 14/4977/2005-06/ ದಿನಾಂಕ 29-08-2011 ರಲ್ಲಿ ಜಾರಿಗೆ ತಂದಿದೆ.

ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ ಎಫ್ ಡಿ (ಸ್ಪೆಷಲ್)/203 ಪಿಇಎನ್ 2012 ದಿನಾಂಕ 16-01-2013 ರಲ್ಲಿ ಈ ಯೋಜನೆ ವ್ಯಾಪ್ತಿಯ ನೌಕರರು ವಯೋ ನಿವೃತ್ತಿ ಹೊಂದಿದಾಗ, ಮೃತರಾದಾಗ ಮತ್ತು ವಯೋ ನಿವೃತ್ತಿಯ ಮುಂಚೆ ಈ ಯೋಜನೆಯಿಂದ ಯಾವುದೇ ಕಾರಣಕ್ಕೆ ಹೊರ ಹೋಗಬಯಸಿದರೆ ಅಂತಹ ಸಂದರ್ಭಗಳಲ್ಲಿ ಹಿಂಪಾವತಿ ಮಾಡಬೇಕಾದ ಸಂಚಿತ ಪಿಂಚಣಿ ಕೊಡುಗೆಯನ್ನು ನಿಗಧಿಪಡಿಸಿದೆ. ಸದರಿ ಆದೇಶವನ್ನು ಕವಿಪ್ರನಿನಿ / ಎಸ್ಕಾಂಗಳಲ್ಲಿ ಅಳವಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಈ ಯೋಜನೆ ವ್ಯಾಪ್ತಿಯ ನೌಕರರು ಸೇವಿಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ಇಡಿಗಂಟು ಪರಿಹಾರ ಮತ್ತು ಪಿಂಚಣಿ ಕೊಡುಗೆ ಎರಡನ್ನೂ ನೀಡಬೇಕೆ ಎನ್ನುವುದರ ಬಗ್ಗೆ ಕರ್ನಾಟಕ ಸರ್ಕಾರದಿಂದ ಸ್ಪಷ್ಟೀಕರಣವನ್ನು ಕೋರಲಾಯಿತು. ಕರ್ನಾಟಕ ಸರ್ಕಾರವು, ಈ ಯೋಜನೆ ವ್ಯಾಪ್ತಿಯ ನೌಕರರು ಸೇವಿಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ಇಡಿಗಂಟು ಪರಿಹಾರ ಮತ್ತು ಪಿಂಚಣಿ ಕೊಡುಗೆ ಎರಡನ್ನೂ ನೀಡಬೇಕೆಂದು ಸ್ಪಷ್ಟೀಕರಣವನ್ನು ನೀಡಿದೆ.

ಈ ಮೇಲಿನ ಹಿನ್ನಲೆಯಲ್ಲಿ ನಿಗಮವು ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಆದೇಶ ಸಂಖ್ಯೆ : ಕೆಇಎನ್‌ಡಿಸಿಪಿಎಸ್‌ಸಿ/ ಬಿ.93/ 35989/2012-13 ದಿನಾಂಕ 06-02-2014**

**ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರಿಗೆ ಸಂಬಂಧಿಸಿದಂತೆ**

1. ಸೇವೆಯಲ್ಲಿರುವಾಗಲೇ ಮೃತರಾದಾಗ, ಅವರ ಕುಟುಂಬದವರಿಗೆ ನೀಡುವ ಇಡಿಗಂಟು ಪರಿಹಾರ ಪಾವತಿ ಬಗ್ಗೆ ಕರ್ನಾಟಕ ಸರ್ಕಾರದಿಂದ ಸ್ಪಷ್ಟೀಕರಣವನ್ನು ಕೋರಿದ್ದ ಹಿನ್ನಲೆಯಲ್ಲಿ ಇಡಿಗಂಟು ಪರಿಹಾರ ಪಾವತಿಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿತ್ತು. ಪ್ರಸ್ತುತ ಇಡಿಗಂಟು ಪರಿಹಾರ ಪಾವತಿ ಮಾಡಬಹುದೆಂದು ಸ್ಪಷ್ಟೀಕರಣ ಬಂದಿರುವುದರಿಂದ ಬಾಕಿ ಇರುವ ಮತ್ತು ಮುಂದೆ ಬರಬಹುದಾದ ಇಡಿಗಂಟು ಪರಿಹಾರ ಪಾವತಿಯನ್ನು ನಿಯಮಾನುಸಾರ ಇತ್ಯರ್ಥಗೊಳಿಸುವುದು.
2. ಈ ಯೋಜನೆ ವ್ಯಾಪ್ತಿಯ ನೌಕರರು ವಯೋ ನಿವೃತ್ತಿ ಹೊಂದಿದಾಗ, ಮೃತರಾದಾಗ ಮತ್ತು ವಯೋ ನಿವೃತ್ತಿಯ ಮುಂಚೆ ಈ ಯೋಜನೆಯಿಂದ ಯಾವುದೇ ಕಾರಣಕ್ಕೆ ಹೊರ ಹೋಗಬಯಸಿದರೆ, ಅಂತಹ ಸಂದರ್ಭಗಳಲ್ಲಿ ಸಂಬಂಧಿಸಿದ ಅಧಿಕಾರಿ / ನೌಕರರು / ಕುಟುಂಬದವರಿಗೆ ಹಿಂಪಾವತಿಸಬೇಕಾದ ಪಿಂಚಣಿ ಕೊಡುಗೆ ಬಗ್ಗೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

(ಸದರಿ ಯೋಜನೆಯ ಅವಶ್ಯಕತೆಗನುಸಾರವಾಗಿ ನಿಧಿ ವ್ಯವಸ್ಥಾಪಕರು (Fund Managers) ಮತ್ತು ವರ್ಷಾಸನ ಸೇವೆ ಒದಗಿಸುವವರು ( Annuity Service Providers ) ರವರ ನೇಮಕಾತಿ ಬಗ್ಗೆ ಕರ್ನಾಟಕ ಸರ್ಕಾರದಿಂದ ಅನುಮತಿ ಕೋರಲಾಗಿದ್ದು, ಅನುಮತಿ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.)

ಆದೇಶದ ಮೇರೆಗೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ

ಪ್ರತಿಗಳು.

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ ಪಿಸಿಕೆಲ್,
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂ/ ಪಿಸಿಕೆಲ್,
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಸ್ಕಾಂ
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ಎಸ್ಕಾಂ

5. ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ಪ್ರಸರಣ) / (ಆರ್ಥಿಕ) / (ಆ ಮತ್ತು ಮಾ.ಸಂ) / ನಿರ್ದೇಶಕರು (ಆರ್.ಎ) ಮತ್ತು ಕಂಪನಿ ಕಾರ್ಯದರ್ಶಿ), ಎಡಿಜಿಪಿ (ವಿಜಿಲೆನ್ಸ್ ಎನ್‌ಫೋರ್ಸ್‌ಮೆಂಟ್ ), ಕವಿಪ್ರನಿನಿ ಮತ್ತು ವಿಸಕಂ / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರುಗಳ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿಭವನ, ಭೆಂಗಳೂರು

<u>ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.</u>

1. ಉಪಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)/ (ತಾಂತ್ರಿಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಎಲ್ಲಾ ನಿಯಂತ್ರಣಾಧಿಕಾರಿಗಳು / ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಕವಿಪ್ರನಿನಿ / ವಿಸಕಂ.
3. ಅಧೀಕ್ಷಕ ಇಂಜಿನಿಯರ್ (ವಿ), ತುಂಗಭದ್ರ ಮಂಡಳಿ, ತುಂಗಭದ್ರ ಡ್ಯಾಂ
4. ಎಲ್ಲಾ ಉಪ ಲೆಕ್ಕ ನಿಯತ್ರಣಾಧಿಕಾರಿಗಳು, ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕವಿಪ್ರನಿನಿ / ವಿಸಕಂ
5. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), (ಕಂಪ್ಯೂಟರ್ ಸೆಂಟರ್, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಎಲ್ಲಾ ಸ.ಕಾ.ನಿ.ಇಂ (ವಿ) / ಲೆಕ್ಕಾಧಿಕಾರಿಗಳು, ಕವಿಪ್ರನಿನಿ / ವಿಸಕಂ

<u>ಪ್ರತಿಗಳನ್ನು ಸೂಕ್ತ ಮಾಹಿತಿಗಾಗಿ.</u>

1. ಶ್ರೀ. ನಾಗರಾಜ್, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು, ನಿರ್ದೇಶಕರು, ಕವಿಪ್ರನಿನಿ / ಬೆವಿಕಂ/ಮಂವಿಕಂ/ ಗುವಿಕಂ/ ಹಾಗೂ ಚಾವಿಸನಿನಿ.
2. ಶ್ರೀ ವಿ. .ವೆಂಕಟಶಿವರೆಡ್ಡಿ, ಅಧ್ಯಕ್ಷರು, ಕೆ.ಇ.ಬಿ. ಇಂಜಿನಿಯರ್‌ಗಳ ಸಂಘ, ಬೆಂಗಳೂರು, ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ವಿಸಕಂ.
3. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು,
4. ಪ್ರಧಾನ ಕಾರ್ಯದರ್ಶಿಗಳು, ಕೆ.ಇ.ಬಿ. ಇಂಜಿನಿಯರ್‌ಗಳ ಸಂಘ, ಬೆಂಗಳೂರು,
5. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು,
6. ಪ್ರಧಾನ ಕಾರ್ಯದರ್ಶಿಗಳು, ಕೆಇಬಿ ಎಸ್.ಸಿ ಮತ್ತು ಎಸ್.ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು,
7. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ಡಿಪ್ಲೋಮೋ ಇಂಜಿನಿಯರ್‌ಗಳ ಸಂಘ, ಬೆಂಗಳೂರು,